"ನಾವು ಆ ಕಡೆ ಈ ಕಡೆ ಯಾವ ಕಡೆಯವರೂ ನಿಮ್ಮ ಮಿಲಿಟರಿಗೆ ಹೆದರುವುದೇ ಇಲ್ಲ" ಎಂದೆ ನಾನು.

"ನಾನು ಸುಮ್ನೆ ತಮಾಷೆಗೆ ಹೇಳಿದ್ದು" ಅಂದ ಆತ.

"ಸತ್ಯ ಹೇಳಬೇಕಾ? ನನಗೆ ಕೆಲವು ಬಾರಿ ಇಲ್ಲಿ ನಿಮ್ಮವರನ್ನು ನೋಡಿದಾಗ ಇವರಾ ನಮ್ಮ ವೈರಿಗಳು ಅನ್ನಿಸಿದ್ದಿದೆ. ಕೈಯಲ್ಲಿರುವ ಎರಡು ದಿರಾಮಿಗೆ ಸರಿಹೊಂದುವಂತೆ ಸಣ್ಣ ಕೆಫೆಟೇರಿಯದಲ್ಲಿ ಎಡಗೈಯಲ್ಲಿ ರೋಟಿ, ಬಲಗೈಯಲ್ಲಿ ಚಾಯ ಹಿಡಿದು ನಾಶ್ತಾ ಮಾಡುವ ಇವರಿಂದ ನಮ್ಮ ನಮ್ಮ ಪಾಕಿಸ್ತಾನ ದೇಶಕ್ಕೆ ಹಾನಿಯಿದೆಯೇ ಅನಿಸಿದ್ದಿದೆ. ಒಮ್ಮೆ ಆಲೋಚಿಸು, ಹೊಟ್ಟೆಪಾಡಿಗೆ ಈ ಮರುಭೂಮಿಗೆ ಬಂದು ಹೀಗೆ ಕಷ್ಟಪಡುವ ನಿಮ್ಮಿಂದ ನಮಗೆ, ನಮ್ಮಿಂದ ನಿಮಗೆ ಜೀವಕ್ಕೆ ಸಂಚಕಾರ ಇದೆಯೇ? ಇಲ್ಲ. ಹಾಗಾದ್ರೆ ಹೊಟ್ಟೆಗಿಲ್ಲದ ನಾವು ಮಿಲಿಟರಿಗೆ ಅಷ್ಟೆಲ್ಲ ಖರ್ಚು ಮಾಡುವುದ್ಯಾತಕ್ಕೆ?" ಕೇಳಿದ ಆತ.

ನಾನು ಸುಮ್ಮನಿದ್ದೆ.

"ನಿನಗೆ ಇಲ್ಲಿ ಬಂದ ಮೇಲೆ ಹಾಗೆ ಅನ್ನಿಸಲಿಲ್ಲವಾ?" ಪುನಃ ಕೇಳಿದ ಆತ.

"ನಾನು ಇತ್ತೀಚೆಗೆ ಬಂದವ. ಹೆಚ್ಚು ಪಾಕಿಸ್ತಾನಿಗಳನ್ನು ನೋಡಿಲ್ಲ" ಎನ್ನುತ್ತ ತಪ್ಪಿಸಿಕೊಂಡೆ.

"ಸತ್ಯ ಹೇಳು, ನಿನಗೆ ನನ್ನನ್ನು ನೋಡಿದರೆ ಕೊಲ್ಲಬೇಕು ಅನ್ನಿಸುತ್ತದಾ?" ಕೇಳಿದ ಆತ. ನನಗೇಕೋ ಇದು ಅತಿರೇಕಕ್ಕೆ ಹೋಗಬಹುದು. ಇನ್ನು ಮುಂದೆ ಜಾಗರೂಕನಾಗಿ ಉತ್ತರಿಸಬೇಕು ಅನ್ನಿಸಿತು.

"ಇಲ್ಲ" ಎಂದೆ ನಾನು.

"ನನಗೂ ಹಾಗೆಯೇ. ನಿನ್ನನ್ನು ನೋಡಿದಾಗ ನಮ್ಮೂರಿನಲ್ಲಿರುವ ಹುಡುಗರಂತೆಯೇ ಕಾಣಿಸುತ್ತೀಯಾ. ನಿನಗೂ ನನ್ನನ್ನು ನೋಡಿದಾಗ ಚಿಕ್ಕಪ್ಪನನ್ನೋ ಮಾವನನ್ನೋ ದೊಡ್ಡಣ್ಣನನ್ನೋ ನೋಡಿದ ಹಾಗೆ ಅನ್ನಿಸಿರಬಹುದು ಅಲ್ವಾ? ಕೊಲ್ಲುವುದು ಬಿಡು, ನಿನ್ನನ್ನು ನೋಡಿದರೆ ಜೋರಾಗಿ ಗದರಿಸಲೂ ನನಗೆ ಮನಸ್ಸು ಬರುತ್ತಿಲ್ಲ" ಎಂದ ಆತ.

ನಕ್ಕೆ ನಾನು.

"ಅಲ್ಲಿ ಸೈನ್ಯದಲ್ಲಿ ನೌಕರಿ ಹುಡುಕಿ ಬರುವವರೂ ನಮ್ಮ ಹಾಗೇ ತಾನೇ. ಅವರಿಗೂ ಯಾರನ್ನೂ ಕೊಲ್ಲಬೇಕು ಅನಿಸಲು ಸಾಧ್ಯವೇ ಇಲ್ಲ. ಏನಂತೀ?" ಎಂದ ಆತ.

"ಯಾರಿಗೂ ಯಾರನ್ನೂ ಕೊಲ್ಲುವ ಮನಸ್ಸು ಬರುವುದೇ ಇಲ್ಲ" ಎಂದೆ ನಾನು.

"ಆದರೆ, ಗಡಿಯಲ್ಲಿದ್ದ ಸೈನಿಕರಿಗೆ ಹಾಗೇಕೆ ಅನಿಸುತ್ತದೆ?" ಕೇಳಿದ ಆತ.

"ಗಡಿದಾಟಿ ಅತಿಕ್ರಮಣ ಮಾಡಿದಾಗ ಗುಂಡು ಹಾರಿಸುತ್ತಾರೆ. ಗುಂಡು ತಾಗಿದವರು ಸಾಯುತ್ತಾರೆ. ಕೊಲ್ಲಬೇಕೆಂದು ಗುಂಡು ಹೊಡೆಯುವುದಲ್ಲ." ತೂಕದ ಮಾತಾಡಿದೆ ನಾನು.

"ಅದೇ. ಅವರನ್ನು ಯಾರೋ ಹುರಿದುಂಬಿಸಿ ಕಳುಹಿಸುತ್ತಾರೆ. ಹೀಗೆ ತಲೆ ಕೆಡಿಸಿ ಗಡಿದಾಟಿಸಿ ಮಜಾನೋಡುವ ಕೆಲವರು ನಿಮ್ಮಲ್ಲೂ ಇದ್ದಾರೆ" ಅಂದ ಹಸನ್.

"ನಿಮ್ಮಲ್ಲಿ ಜಾಸ್ತಿ" ಫಕ್ಕನೆ ನನ್ನ ಮಾತು ಬಂದು ಹೋಯಿತು.

ಒಂದು ಕ್ಷಣ ಆತ ಸುಮ್ಮನಿದ್ದ. "ಒಪ್ಪಿಕೊಂಡೇ..." ರಾಗ ಎಳೆದ. "ಆದರೆ, ನಿಮ್ಮಲ್ಲೂ ನಮ್ಮಲ್ಲೂ ಅವರು ಸಾಯುವುದಿಲ್ಲ. ಸಾಯುವವರು ನೌಕರಿಗಾಗಿ ಮಿಲಿಟರಿಗೆ ಸೇರಿದವರು. ಏನನ್ನುತ್ತೀ?" ಎಂದ.

ಹೌದೆಂಬಂತೆ ತಲೆಯಾಡಿಸಿದೆ ನಾನು.

"ನಿನಗೆ ವಿಷಯ ಗೊತ್ತಿದೆಯಾ? ಮಿಲಿಟರಿ ಸಾಮಗ್ರಿ ಖರೀದಿಸಲು ನಾವು ಸಾಲ ಮಾಡುತ್ತೇವೆ. ನೀವು ದೊಡ್ಡಮೊತ್ತವನ್ನು ಬಜೆಟಿನಲ್ಲಿ ತೆಗೆದಿಡುತ್ತೀರಿ. ಇದರಿಂದ ಯಾರಿಗೆ ಲಾಭವಾಗುತ್ತದೆ?